ವಿಷಯ: ರಾಜ್ಯದ ಲೋಕೋಪಯೋಗಿ ಇಲಾಖೆಯಿಂದ ಆಗಿರುವ ಕಾಮಗಾರಿಗೆ ಸರ್ಕಾರದಿಂದ ಕೊಡಬೇಕಾದ ಬಾಕಿ ಹಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 134(67)

ಶ್ರೀ. ಕೆ.ಎಸ್. ಈಶ್ವರಪ್ಪ(ಶಿವಮೊಗ್ಗ)

ಮಾನ್ಯ, ಲೋಕೋಪಯೋಗಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯವತಿಯಿಂದ ಆಗಿರುವ ಕಾಮಗಾರಿಗೆ ಸರ್ಕಾರದಿಂದ ಕೊಡಬೇಕಾದ ಬಾಕಿಹಣವೆಷ್ಟು. (ಜಿಲ್ಲಾವಾರು ವಿವರ ನೀಡುವುದು).

ಆ) ಈ ಹಣವನ್ನು ಪಾವತಿ ಮಾಡಲಾಗುವುದು; ಮಾಡದಿದ್ದಲ್ಲಿ ತುರ್ತು ಕೆಲಸ ಕುಂಠಿತಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ.

ಇ) ಬಂದಿದ್ದಲ್ಲಿ ಸರ್ಕಾರದವರು ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ. ಶಿವಾನಂದ ಹೆಚ್. ಕೌಜಲಗಿ
ಲೋಕೋಪಯೋಗಿ ಸಚಿವರು.

ವಿಧಾನ ಸಭೆಯ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 67.

ಅನುಬಂಧ

ಲೋಕೋಪಯೋಗಿ ಇಲಾಖೆಯ ಉಳಿಕೆ ಬಿಲ್ಲುಗಳು (ಜಿಲ್ಲಾ ವಿವರ)

	ಜಿಲ್ಲೆಯ ಹೆಸರು	28.2.95ರಲ್ಲಿದ್ದ ಉಳಿಕೆ ಬಿಲ್ಲು (ಲಕ್ಷ ರೂ.ಗಳಲ್ಲಿ)
1.	ಬೆಂಗಳೂರು	847.96
2.	ಕೋಲಾರ	284.58
3.	ತುಮಕೂರು	200.37
4.	ಮೈಸೂರು	444.26
5.	ಮಂಡ್ಯ	235.24
6.	ಹಾಸನ	224.73
7.	ಚಿಕ್ಕಮಗಳೂರು	104.31
8.	ದಕ್ಷಿಣ ಕನ್ನಡ	218.40
9.	ಕೊಡಗು	143.23

10.	ಶಿವಮೊಗ್ಗ	473.88
11.	ಚಿತ್ರದುರ್ಗ	262.65
12.	ಧಾರವಾಡ	402.58
13.	ಕಾರವಾರ	93.93
14.	ಬೆಳಗಾಂ	392.55
15.	ಬಿಜಾಪುರ	122.92
16.	ಗುಲ್ಬರ್ಗಾ	283.96
17.	ಬೀದರ್	159.46
18.	ಬಳ್ಳಾರಿ	447.15
19.	ರಾಯಚೂರು	334.11
	ಒಟ್ಟು	5676.27

ವಿಷಯ: ರಾಜ್ಯದಲ್ಲಿ ರೇಷನ್ ಕಾರ್ಡ್ ವಿತರಣೆಯಲ್ಲಿ ವಿಳಂಬ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 135(66)

ಶ್ರೀ. ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ)

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ರೇಷನ್ ಕಾರ್ಡ್ ವಿತರಣೆಯಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೆ.

ಆ) ಹಾಗಿದ್ದಲ್ಲಿ ರೇಷನ್ ಕಾರ್ಡ್ ವಿತರಿಸಲು ಸರಳ ವಿಧಾನವನ್ನು ರೂಪಿಸಿ ಜನತೆಗೆ ಅನುಕೂಲವಾಗುವಂತೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ. ಎಸ್. ನಂಜಪ್ಪ
ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು.

ಅ) ಅಗತ್ಯವಿರುವ ಮಾಹಿತಿ ಮತ್ತು ದಾಖಲೆಗಳೊಂದಿಗೆ ಸಲ್ಲಿಸಿದ ಅರ್ಜಿದಾರರಿಗೆ ಪಡಿತರ ಚೀಟಿ ವಿತರಣೆಯಲ್ಲಿ ವಿಳಂಬವಾಗಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.